

## ಎಂಥಾ ಕಾಲವಯ್ಯಾ!

ಗುಂಡ ಎಸ್ಸೆಸ್ಸೆಲ್ಸಿ ಉತ್ತರಪತ್ರಿಕೆಗಳ ಮೌಲ್ಯಮಾಪನಕ್ಕೆ ಹೋಗಿದ್ದನು. ಕೆಲಸ ಮಾಡುತ್ತಿದ್ದಾಗ ಒಬ್ಬನ ಉತ್ತರ ಪತ್ರಿಕೆಯ ಮೊದಲನೆ ಪುಟದಲ್ಲಿ 'ಪುಟ ಮುಂದಕ್ಕೆ ತಿರುಗಿಸಿ' ಎಂದಷ್ಟೇ ಬರೆದಿದ್ದ. ಹಾಗೆಯೇ ಉಳಿದ 36 ಪುಟಗಳಲ್ಲೂ ಬರೆದಿದ್ದು, ಕೊನೆಯ ಪೇಜಿನಲ್ಲಿ, 'ಸಾರ್, ಇಷ್ಟು ತಾಳ್ಮೆಯಿಂದ, ಸಹನೆಯಿಂದ ಪುಟಗಳನ್ನು ತಿರುಗಿಸಿದ್ದಕ್ಕೆ ಧನ್ಯವಾದಗಳು. ಈಗ ಈ ಬಡಪಾಯಿಗೆ ಕಡೇಪಕ್ಷ ಪಾಸ್ ಮಾರ್ಕ್ ಹಾಕಿ ಪಾಸ್ ಮಾಡದಿದ್ದರೆ ನಿಮ್ಮ ಮನೆ ದೇವರ ಮೇಲೆ ಆಣೆ!' ಎಂದು ಬರೆದಿದ್ದ (ಬೆದರಿಸಿದ್ದ!). ಗುಂಡ ವಿಚಲಿತನಾಗದೆ ಎಂಥಾ ಕಾಲ ಬಂತಪ್ಪ ಅಂತ ಗುಂಡಗೆ ಸುತ್ತಿದ!

**ವಿ. ಪ್ರಭಾ, ಬೆಳಗೊಳ**

## ಸೇರಿಗೆ ಸವ್ವಾಸೇರು

ಗುಂಡಯ್ಯ ಶೆಟ್ಟರ ಅಂಗಡಿ ಪಕ್ಕದಲ್ಲೇ 'ವಿಲೇಜ್ ಹೈಪರ್ ಮಾರ್ಕೆಟ್' ಅನ್ನೋ ದೊಡ್ಡ ಮಾಲ್ ತರಹದ ಅಂಗಡಿ ಬಂದಿತು. ಶೆಟ್ಟರ ಅಂಗಡಿ ವ್ಯಾಪಾರ ಸ್ವಲ್ಪ ಕುಂದಿತು. ಇದರಿಂದ ಬೇಸರಗೊಂಡ ಶೆಟ್ಟರು ಒಂದು ದಿನ ಆ ಮಾಲ್‌ನ ಆಚೆ ಬೆಣ್ಣೆ 1ಕೆಜಿಗೆ ರೂ. 200 ಬೋರ್ಡ್ ನೋಡಿ ತಮ್ಮ ಅಂಗಡಿ ಮುಂದೆ ಬೆಣ್ಣೆ ಬೆಲೆ 1ಕೆಜಿಗೆ ರೂ. 150 ಅಂತ ಬರೆದರು. ಇದನ್ನು ನೋಡಿ ಆ ಮಾಲ್‌ನವನು ರೂ. 125 ಅಂತ ಬರೆದ. ಆಗ ಶೆಟ್ಟರು ಕೇವಲ ರೂ. 100 ಅಂತ ಬರೆದರು. ಮಾಲ್‌ನವರು ರೂ. 75 ಕೆಜಿಗೆ ಅಂತ ಬರೆದಾಗ ಶೆಟ್ಟರು ರೂ. 50 ಕ್ಕೆ 1ಕೆಜಿ ಬೆಣ್ಣೆ ಅಂತ ಬರೆದರು. ಆಗ ಶೆಟ್ಟರ ಹಿತೈಷಿಗಳು ಬಂದು, 'ಶೆಟ್ಟರೇ ಏನಿದು ಹುಚ್ಚಾಟ? ಯಾಕೆ ನೀವು ನಷ್ಟ ಮಾಡಿಕೊಳ್ಳುತ್ತೀರಿ?' ಎಂದಾಗ ಶೆಟ್ಟರು ನಸುನಕ್ಕು, 'ನಷ್ಟವಾಗಕ್ಕೆ ನನ್ನ ಹತ್ತಿರ ಮಾರಾಟ ಮಾಡಲು ಬೆಣ್ಣೆಯೇ ಇಲ್ಲವಲ್ಲ' ಎಂದಾಗ ಎಲ್ಲರೂ ಸುಸ್ತು.



**ವಿ. ವಿಜಯೇಂದ್ರ ರಾವ್, ಬೆಂಗಳೂರು**